

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಹೂವು-ಮುಳ್ಳು

ಬದುಕಿನಲ್ಲಿ ಗತಕಾಲಕ್ಕೆ ಸರಿದುಹೋದ ನಿನ್ನೆಯ ದಿನಗಳನ್ನು ರದ್ದಿಪತ್ರಿಕೆಗೆ ಹೋಲಿಸುವುದು ಸಮಂಜವಲ್ಲವೆಂದು ಕಳೆದವಾರದ ಅಂಕಣದಲ್ಲಿ ಮಂಡಿಸಿದ್ದ ನಮ್ಮ ವಾದವನ್ನು ಒಪ್ಪಿ ಅನೇಕ ಓದುಗರು ಪ್ರತಿಕ್ರಿಯಿಸಿದ್ದಾರೆ. "Your argument has been totally accepted by the 'Full Bench' of the elitist readers" ಎಂದು ಪೂರ್ಣಸಹಮತ ವ್ಯಕ್ತಪಡಿಸಿರುವ ಮೈಸೂರಿನ ಸಹೃದಯ ಓದುಗರಾದ ರಾಮಚಂದ್ರರವರು "Yes, the past mistakes/actions shall be taken as learning experience and provide opportunity to face tomorrow with confidence and tomorrow can be faced as it comes without fear" ಎಂದು ಪ್ರತಿಕ್ರಿಯಿಸಿದ್ದಾರೆ. "ವರ್ತಮಾನದಲ್ಲಿ ಬದುಕನ್ನು ಸಾಗಿಸಲು ಬೇಕಾದ ತಾಳ್ಮೆ, ಧೈರ್ಯ, ಹೊಂದಾಣಿಕೆ, ಭವಿಷ್ಯದ ಆಗುಹೋಗುಗಳನ್ನು ಎದುರಿಸುವ ಎದೆಗಾರಿಕೆ ನಮಗೆ ಬಾಳ 'ರದ್ದಿಪತ್ರಿಕೆ'ಯಿಂದಲೇ ಬರಬೇಕು" ಎಂದು ಬೆಂಗಳೂರಿನಿಂದ ಪ್ರತಿಕ್ರಿಯಿಸಿರುವ ಇನ್ನೋರ್ವ ಯುವ ಓದುಗರಾದ ಚಂದ್ರು ಒಂದು ಅಪರೂಪದ ಕವಿತೆಯನ್ನೇ ಬರೆದುಕಳುಹಿಸಿದ್ದಾರೆ:

**ಬದುಕ ಅರಿಯಬೇಕು ನೋವು ನಲಿವುಗಳಿಂದ**
**ಚಂದ್ರನ ಬೆಳಕಂತೆ ಸಿಹಿ ಘಟನೆಗಳು**
**ಅಮವಾಸ್ಯೆಯ ಕತ್ತಲಂತೆ ಕಹಿ ಘಟನೆಗಳು**
**ಎರಡೂ ಬೇಕು ಬಾಳಲಿ ಸೂರ್ಯ-ಚಂದ್ರರಂತೆ**
**ಪರಿಪಕ್ವವಾಗಲು ಮಾನವ ಜನ್ಮಕೆ...**



ನಿನ್ನೆಯ ಚಿಂತೆ ಇಲ್ಲದೆ, ನಾಳೆಯ ಪರಿವೆ ಇಲ್ಲದೆ ಇಂದಿನ ವರ್ತಮಾನಕಾಲದಲ್ಲಿ ಬದುಕುವವರು ಯಾರಾದರೂ ಇದ್ದರೆ ಅವರೇ ಮಕ್ಕಳು. ಜೀವನಾನುಭವವಿಲ್ಲದ ಮಕ್ಕಳಿಗೆ ಏನೂ ತಿಳಿಯುವುದಿಲ್ಲ ಎಂದು ಆಪಾದಿಸುವ ಹಿರಿಯರು ಹೇಗೆ ವರ್ತಮಾನದಲ್ಲಿ ಬದುಕಬೇಕೆಂಬುದನ್ನು ಮಕ್ಕಳಿಂದ ಪಾಠ ಕಲಿಯಬೇಕು. ಮಕ್ಕಳ ಮೋಹಕತೆಯನ್ನು ಕುರಿತ ಒಂದು ಜನಪದಗೀತೆ ಹೀಗಿದೆ:

**ನನ್ನಯ್ಯನಂತೋರು ಹನ್ನೆರಡು ಮಕ್ಕಳು**
**ಹೊನ್ನೆಯ ಮರದ ನೆಳಲಲಿ | ಆಡುವಾಗ**
**ಸಂನ್ಯಾಸಿ ಜಪವ ಮರೆದಾsನ**

ಹೊನ್ನೆಯ ಮರದ ನೆರಳಿನಲ್ಲಿ ಕುಣಿದು ಕುಪ್ಪಳಿಸುತ್ತಾ ಆಟವಾಡುತ್ತಿರುವ ಮಕ್ಕಳನ್ನು ನೋಡಿ ಸಂನ್ಯಾಸಿಯು ತನ್ನ ಜಪವನ್ನೇ ಮರೆತುಬಿಟ್ಟನಂತೆ. ಮಕ್ಕಳ ಮುಗ್ಧತೆಯನ್ನು ಆಸ್ವಾದಿಸುವುದಕ್ಕಿಂತ ಬೇರೆ ತಪಸ್ಸಿಲ್ಲ ಎಂಬ ಆಶಯದ ನಿರಕ್ಷರ ಕುಕ್ಷಿಯಾದ ಗರತಿಯ ಈ ಮಾತು ಎಲ್ಲ ವೇದ ವೇದಾಂತ ಶಾಸ್ತ್ರಗಳನ್ನು ಮೀರಿದ ಅನುಭಾವವೆಂದರೆ ಅತಿಶಯೋಕ್ತಿಯಾಗಲಾರದು.

ಮಕ್ಕಳನ್ನು ನೋಡಿದರೆ ಎಂತಹ ಕಟುಕನ ಹೃದಯವೂ ಕರಗುತ್ತದೆ. ದರೋಡೆಕೋರ ಮನೆ ನುಗ್ಗಿ ದರೋಡೆ ಮಾಡುವಾಗ ದೊಡ್ಡವರನ್ನು ಹಿಂಸಿಸಬಹುದೇ ಹೊರತು ಮಕ್ಕಳನ್ನಲ್ಲ. ನಿರ್ವಂಶ ಮಾಡಿಬಿಡುತ್ತೇನೆ ಎಂಬ ಹ್ಯಾವ ಇದ್ದಾಗ ಮಾತ್ರ ಮಕ್ಕಳು ಹಿಂಸೆಗೆ ಒಳಗಾಗಬಹುದು. ಅಥವಾ ತನ್ನ ಅಸ್ತಿತ್ವಕ್ಕೇ ಸಂಚಕಾರ ಎಂದು ತಿಳಿದಾಗ ಮಾತ್ರ ಕಂಸನಂತೆ ಅಥವಾ ಹೆರೋಡ್ ದೊರೆಯಂತೆ ಶಿಶುಹತ್ಯೆಗೆ ಮುಂದಾಗಬಹುದು. ಬಾಲಕ ಚಂದ್ರಹಾಸನನ್ನು ಕೊಲ್ಲಲು ದುಷ್ಟಬುದ್ಧಿ ಮಂತ್ರಿಯು ಕಟುಕರಿಗೆ ಒಪ್ಪಿಸಿದಾಗ ಕಟುಕರು ಮಾಡಿದ್ದೇನು? ಅವರ ಹೃದಯದಲ್ಲೂ ಕರುಣೆ ಒಸರಿತಲ್ಲವೆ? ಚಂದ್ರಹಾಸನನ್ನು ಕೊಲ್ಲದೆ ಕೊಂದ ಕುರುಹಿಗಾಗಿ ಆ ಬಾಲಕನ ಕಾಲಿನಲ್ಲಿದ್ದ ಆರನೆಯ ಬೆರಳನ್ನು ಮಾತ್ರ ಕತ್ತರಿಸಿ ತಂದು ದುಷ್ಟಬುದ್ಧಿಗೆ ತೋರಿಸಿದರಂತೆ. ಈ ಮನಮಿಡಿಯುವ ಪ್ರಸಂಗವನ್ನು ಲಕ್ಷ್ಮೀಶ ಕವಿ ಜೈಮಿನಿ ಭಾರತದಲ್ಲಿ ಸುಂದರವಾಗಿ ಚಿತ್ರಿಸಿದ್ದಾನೆ. ಎಂಥಾ ಕ್ರೂರಿಯೇ ಆಗಿರಲಿ, ಎಂಥಾ ಕಠಿಣ ಹೃದಯಿಯೇ ಆಗಿರಲಿ ಮಗುವಿನ ಮೋಹಕ ಮುಖದೆದುರು, ಅದರ ಸಂಮೋಹಕ ನಗುವಿನೆದುರು ಕರಗಿ ಹೋಗುತ್ತಾನೆ!

'ನಿಸರ್ಗ ಹೊಸದಾಗಿ ಬರೆದ ಹಸಿ ಚಿತ್ರ' ಎಂದು ಮಗುವನ್ನು ಬಣ್ಣಿಸಲಾಗಿದೆ. ಆ ಸುಂದರವಾದ ಚಿತ್ರದ ಮೇಲೆ ಲೋಕವ್ಯವಹಾರದ ಕಪ್ಪು ಮಸಿ ಬಿದ್ದು ವಿಕೃತರೂಪ ತಾಳುತ್ತದೆ. 'ಮಕ್ಕಳು ಖಾಲಿಚೀಲವಿದ್ದಂತೆ, ಯುವಕರು ತೂತಿನ ಚೀಲವಿದ್ದಂತೆ, ವಯಸ್ಸಾದವರು ತುಂಬಿದ ಚೀಲವಿದ್ದಂತೆ' ಎಂದು ನಮ್ಮ ಲಿಂಗೈಕ್ಯ ಗುರುವರ್ಯರು ಹೇಳುತ್ತಿದ್ದರು. ತೂತಿನ ಚೀಲದಲ್ಲಿ ಏನೇ ತುಂಬಲು ಪ್ರಯತ್ನಿಸಿದರೂ ಸೋರಿಹೋಗುತ್ತದೆ. ತುಂಬಿದ ಚೀಲದಲ್ಲಿ ಹೊಸದಾಗಿ ತುಂಬಲು ಜಾಗವೇ ಇಲ್ಲ. ಅದನ್ನು ಹೊಲಿದು ಸಾಗಿಸುವುದಷ್ಟೇ ಬಾಕಿ ಇರುವುದು! ಇನ್ನು ಖಾಲಿಚೀಲದಂತಿರುವ ಮಕ್ಕಳ ಮನಸ್ಸಿನಲ್ಲಿ ಒಳ್ಳೆಯದನ್ನು ತುಂಬುವ ಗುರುತರ ಹೊಣೆಗಾರಿಕೆ ದೊಡ್ಡವರ ಮೇಲಿದೆ.

ಏನನ್ನೂ ತುಂಬದಿದ್ದರೂ ಸರಿ, ಕೆಟ್ಟದ್ದನ್ನು ತುಂಬದಿದ್ದರೆ ಸಾಕು. ಮಕ್ಕಳು ಹುಟ್ಟುತ್ತಾ ವಿಶ್ವಕುಟುಂಬಿಗಳೇ. ಹಿರಿಯರು ತಮ್ಮ ಅಲ್ಪತನವನ್ನು ಮಗುವಿನಲ್ಲಿ ತುಂಬಿ ಅದನ್ನು ಕುಬ್ಜಗೊಳಿಸುತ್ತಾರೆ.

ವಯಸ್ಸು ಕಳೆದಂತೆ ಮನುಷ್ಯ ಜೀವನೋತ್ಸಾಹವನ್ನು ಕಳೆದುಕೊಂಡು ಹತಾಶೆಗೆ ಒಳಗಾಗುತ್ತಾನೆ. ಮಗುವನ್ನು ನೋಡಿ ಆ ಉತ್ಸಾಹವನ್ನು ಉಳಿಸಿಕೊಳಬೇಕು. ಮಗುವಿನಿಂದ ಮನುಷ್ಯ ಕಲಿಯುವುದು ಬೇಕಾದಷ್ಟಿದೆ! ಪ್ರಖ್ಯಾತ ಆಂಗ್ಲ ಕವಿ ವಿಲಿಯಂ ವರ್ಡ್ಸ್‌ವರ್ತ್ ಬಾಲ್ಯದ ಮಹತ್ವವನ್ನು "Rainbow" ಎಂಬ ಈ ಕೆಳಗಿನ ಪದ್ಯದಲ್ಲಿ ಬಹಳ ಅರ್ಥಪೂರ್ಣವಾಗಿ ದಾಖಲಿಸಿದ್ದಾನೆ:

My heart leaps up when I behold
A rainbow in the sky:
So was it when my life began;
So is it now I am a man;
So be it when I shall grow old,
Or let me die!
The Child is father of the Man;
And I could wish my days to be
Bound each to each by natural piety

**ಕುಣಿದಾಡುವುದು ನನ್ನ ಹೃದಯ**
**ಆಗಸದಿ ಕಾಮನಬಿಲ್ಲ ನೋಡಿ,**
**ಇದ ನೋಡಿ ಕುಣಿದಾಡಿದ್ದೆ ನನ್ನ ಬಾಲ್ಯದಲಿ,**
**ಸೆಳೆಯುತಿದೆ ಈಗಲೂ ನನ್ನೀ ಯೌವನದಲಿ**
**ಹೀಗೆಯೇ ನಲಿಯುವಂತಾಗಲಿ ನನ್ನ ಮುಪ್ಪಿನಲಿ,**
**ಅಲ್ಲದಿರೆ ಬರಲಿ ಸಾವು ನನಗಂದೇ.**
**ಮನುಕುಲದ ತಂದೆಯೇ ಮಗು**
**ಅದುಕಾರಣ, ಎನ್ನ ಮನ ಹಾರೈಸುತಿದೆ:**
**ನಿಸರ್ಗದ ಚೆಲುವಿನಿಂ ಕೂಡಿ ಬೆಸೆಯಲಿ**
**ನನ್ನ ಬಾಳಿನ ದಿನಗಳು ಒಂದಕೊಂದು!**

ಕವಿಯು ಈ ಪದ್ಯದಲ್ಲಿ ಮಗುವನ್ನು ಕಾಮನಬಿಲ್ಲಿಗೆ ಹೋಲಿಸಿದ್ದಾನೆ. ಕಾಮನಬಿಲ್ಲಿನಲ್ಲಿರುವ ಪ್ರಾಕೃತಿಕ ಸೊಬಗೇ ಮಗುವಿನಲ್ಲಿಯೂ ಇದೆ. ಕಾಮನಬಿಲ್ಲು ನೋಡುಗರನ್ನು ಆಕರ್ಷಿಸುವಂತೆ ಮಗುವಿನ ಮುಗ್ಧತೆ ಎಲ್ಲರನ್ನೂ ಆಕರ್ಷಿಸುತ್ತದೆ. ಅಂತಹ ಮಾಂತ್ರಿಕಶಕ್ತಿ ಅದರಲ್ಲಿ ಅಡಗಿದೆ. ಇಡೀ ಮನುಕುಲವೇ ಮಗುವಿನಲ್ಲಿದೆ; ಅದು ಮನುಕುಲದ ಭವಿಷ್ಯವಾಗಿದೆ. ನಿನ್ನೆಯ, ಇಂದಿನ, ನಾಳೆಯ ಕಾಮನಬಿಲ್ಲು ಒಂದೇ ತೆರನಾದ ಆಹ್ಲಾದವನ್ನು ಆಬಾಲವೃದ್ಧರಿಗೆ ಉಂಟುಮಾಡುತ್ತದೆ. ದಿನದಿಂದ ದಿನಕ್ಕೆ ಅದರ ಸೊಬಗು ತಗ್ಗುವುದಿಲ್ಲ. ಮಗುವಿನಲ್ಲಿ ಅಂಥಹುದೇ ಮುಗ್ಧತೆಯಿದೆ. ಆದರೆ ದಿನ ಕಳೆದಂತೆ, ಬೆಳೆದಂತೆ ಕ್ರಮೇಣ ಮಗು ಅದನ್ನು ಕಳೆದುಕೊಳುತ್ತದೆ. ಸುಂದರವಾಗಿದ್ದ ಹೂವು ಬೆಳೆದಂತೆ ಬಾಡಿಹೋಗುವ ಹಾಗೆ. ಹೂವಿನಂತಹ ಮನಸ್ಸು ಒರಟಾಗುತ್ತದೆ. 'World loses a pretty flower and instead thorn survives' ಎಂದು ಕವಿಯೊಬ್ಬ ತನ್ನ ಅಳಲನ್ನು ವ್ಯಕ್ತಪಡಿಸುತ್ತಾನೆ. ಹೂವು ಒಣಗಿ ಹೋಗಿ, ಅದರ ಜಾಗದಲ್ಲಿ ವಿಕಾರವಾದ ಚುಚ್ಚುವ ಅಸಹ್ಯ ಮುಳ್ಳು ಮಾತ್ರ ಉಳಿಯುತ್ತದೆ. ಪ್ರೌಢಾವಸ್ಥೆಗೆ ತಲುಪಿದ ಮೇಲೂ ಕವಿ ಮಗುವಿನ ಮುಗ್ಧತೆಗೆ ಮಾರುಹೋಗಿ ಮಗುವಿನಂತೆಯೇ ಬಾಳಿ ಬದುಕಲು ಬಯಸುತ್ತಾನೆ. ಹೇಗೆ ಕಾಮನಬಿಲ್ಲಿನ ಮೋಹಕತೆ ಎಲ್ಲ ಕಾಲದಲ್ಲೂ ಒಂದೇ ತೆರನಾಗಿ ಇರುತ್ತದೆಯೋ ಹಾಗೆಯೇ ತನ್ನ ಬದುಕಿನ ಎಲ್ಲ ದಿನಗಳು ಅಂಥ ಖುಷಿಯನ್ನು ನೀಡುವಂತೆ ಒಂದಕ್ಕೊಂದು ಹೆಣೆದುಕೊಂಡಿದ್ದರೆ ಎಷ್ಟು ಚೆನ್ನ ಎಂದು ಕವಿ ಹೃದಯ ಹಾರೈಸುತ್ತದೆ.

ಸಹೃದಯ ಓದುಗರೇ! ನಿನ್ನೆ ನೋಡಿದ ಸುಂದರವಾದ ವಸ್ತು ಇಂದು ಸುಂದರವಾಗಿ ಕಾಣದಿರಬಹುದು. ಮೊದಲನೆಯ ಬಾರಿ ನೋಡಿದಾಗ ಸಿಕ್ಕ ಖುಷಿ, ಸಂತೋಷ ಎರಡನೆಯ ಬಾರಿ ನೋಡಿದಾಗ ಅದೇ ಮಟ್ಟದ ಖುಷಿ, ಸಂತೋಷ ಆಗದಿರಬಹುದು. ಆದರೆ ಸೌಂದರ್ಯ ಇರುವುದು ಬಾಹ್ಯವಸ್ತುವಿನಲ್ಲಿ ಅಲ್ಲ; ನೋಡುವ ದೃಷ್ಟಿಯಲ್ಲಿ. ಬಾಳಿನುದ್ದಕ್ಕೂ ಅಂತಹ ದೃಷ್ಟಿಕೋನವನ್ನು ಬೆಳೆಸಿಕೊಂಡು ಬದುಕುವುದೇ ಬಾಳ ಯಶಸ್ಸಿನ ಹಾದಿ!

17.11.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑